**SC No. 149/2025**
**PW-06**
**CW-24**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **149/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಿಂಗಪ್ಪ ಮರಿಕಟ್ಟಿ | ಪ್ರಾಸಾ: 06 |
| ತಂದೆಯ/ಗಂಡನ ಹೆಸರು | : | ಅಣ್ಣಪ್ಪ ಮರಿಕಟ್ಟಿ | ಚಾಸಾ: 24 |
| ವಯಸ್ಸು | : | 35 ವರ್ಷ | ದಿನಾಂಕ : 01.09.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಮೇಲ್ವಿಚಾರಕರು, ಮಕ್ಕಳ ಸಹಾಯವಾಣಿ, ಬೆಳಗಾವಿ | |
| ವಾಸಸ್ಥಳ | : | ಬಡಾಲಅಂಕಲಗಿ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-1 ನನಗೆ ಗೊತ್ತು. ಅವರು ಬೆಳಗಾವಿಯ ಸರ್ಕಾರಿ ದತ್ತು ಸ್ವೀಕಾರ ಕೇಂದ್ರದಲ್ಲಿ ಸಂಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾನು ಕಳೆದ 10 ವರ್ಷಗಳಿಂದ ಬೆಳಗಾವಿಯ ಮಕ್ಕಳ ಸಹಾಯವಾಣಿಯಲ್ಲಿ ಮೇಲ್ವಿಚಾರಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಚಾಸಾ-23 ಮತ್ತು 25 ರಿಂದ 27 ಗೊತ್ತು ಅವರು ನಮ್ಮ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**SC No. 149/2025**
**PW-06**
**CW-24**

2. ದಿಃ 08.06.2024 ರಂದು ಚಾಸಾ-1 ರವರಿಗೆ ಮಾಹಾಂತೇಶ ಭಜಂತ್ರಿ ರವರು ಮಾರನೇಯ ದಿನ ಒಂದು ಹೆಣ್ಣು ಮಗುವಿನ ಮಾರಾಟ ಆಗುತ್ತದೆ ಮತ್ತು ಅದನ್ನು ನಾವು ರಕ್ಷಿಸಬೇಕು ಎಂದು ತಿಳಿಸಿದ್ದರು ಎಂದು ಚಾಸಾ-1 ನನಗೆ ತಿಳಿಸಿದರು. ಅದೇ ದಿನ ನಾವು ಒಂದು ತಂಡವನ್ನು ರಚಿಸಿದೆವು. ಆ ತಂಡದಲ್ಲಿ ನಾನು, ಚಾಸಾ-23, ಮತ್ತು 25 ರಿಂದ 27 ಇದ್ದೆವು. ಚಾಸಾ-1 ರವರು ನನಗೆ ಆ ವ್ಯಕ್ತಿಗಳು ಮಗುವಿನ ಮಾರಾಟ ಮಾಡುವ ಬಗ್ಗೆ ಬೆಳಗಾವಿಯ ನಿಸರ್ಗಾ ಹೋಟೆಲ್ ಬಳಿ ಬರುತ್ತಾರೆ ಮತ್ತು ನಾವು ಅಲ್ಲಿಗೆ ಹೋಗಿ ಮಗುವನ್ನು ಖರೀದಿ ಮಾಡುವ ಬಗ್ಗೆ ನಾಟಕ ಮಾಡಬೇಕು ಮತ್ತು ನಾನು ಖರೀದಿ ಮಾಡುವ ಬಗ್ಗೆ ತಂದೆಯಾಗಿ ಮತ್ತು ಚಾಸಾ-27 ರವರು ತಾಯಿಯಾಗಿ ನಟಿಸಬೇಕು ಎಂದು ತಿಳಿಸಿದರು.

3. ಆ ಪ್ರಕಾರ ದಿಃ 09.06.2024 ರಂದು ಬೆಳಿಗ್ಗೆ 5-30 ಗಂಟೆಗೆ ನಾವು ತಂಡದ ಸದಸ್ಯರು ಬೆಳಗಾವಿಯ ರಾಷ್ಟ್ರಿಯ ಹೆದ್ದಾರಿಯಲ್ಲಿರುವ ನಿಸರ್ಗ ಹೋಟೆಲ್ ಬಳಿ ಹೋದೆವು. ನಮ್ಮ ತಂಡದ ಸದಸ್ಯರಲ್ಲದೇ ನಮ್ಮೊಂದಿಗೆ ಮಹಿಳಾ ಪೋಲಿಸರು ಕೂಡ ಇದ್ದರು. ನಾನು ಮತ್ತು ಚಾಸಾ-27 ನನ್ನ ಬೈಕಿನಲ್ಲಿ ಅಲ್ಲಿಗೆ ಹೋಗಿದ್ದೇವು. ಬೆಳಗಿನ ಜಾವ 6-00 ಗಂಟೆಯ ಸುಮಾರು ಬಾಗೇವಾಡಿ ಕರೆಯಿಂದ ಒಂದು ಬಳಿ ಬಣ್ಣದ ಕಾರು ನಾವು ಇದ್ದ ಸ್ಥಳದ ಬಳಿ ಬಂದಿತು. ಆ ಕಾರಿನಿಂದ 1ನೇ ಆರೋಪಿಯು ಇಳಿದು ಚಾಸಾ-27 ರವರೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಚಾಸಾ-27 ರವರು ಕೈ ಸನ್ನೆ ಮಾಡಿದಾಗ ನಾವೆಲ್ಲರೂ ಅಲ್ಲಿಗೆ ಹೋದೆವು. ಆ ಕಾರಿನ ಒಳಗಡೆ 1ನೇ ಆರೋಪಿ ಅಲ್ಲದೇ ಒಂದು ಹುಡುಗಿ ಇದ್ದು ಆಕೆ ಸಣ್ಣ ಮಗುವನ್ನು ಹಿಡಿದುಕೊಂಡಿದ್ದಳು. ಆ ಮಗುವನ್ನು ಚಾಸಾ-27 ರವರು ತನ್ನ ಬಳಿ ತೆಗೆದುಕೊಂಡರು. ಆ ಬಳಿಕ ನಾವು 1ನೇ ಆರೋಪಿ ಮತ್ತು ಮಗುವನ್ನು ಕರೆದುಕೊಂಡು ಮಾಳಮಾರುತಿ ಪೋಲಿಸ ಠಾಣೆಗೆ ಹೋದೆವು. ಆ ಮಗು ಸುಮಾರು ಒಂದುವರೆ ತಿಂಗಳಿನ ಹೆಣ್ಣು ಮಗುವಾಗಿತ್ತು.

**SC No. 149/2025**
**PW-06**
**CW-24**

4. ಚಾಸಾ-27 ರವರು 1ನೇ ಆರೋಪಿಗೆ ಮೊದಲೇ ಫೋನ ಮಾಡಿದ್ದರು. 1ನೇ ಆರೋಪಿಯು ಚಾಸಾ-27 ರವರಿಗೆ ರೂ. 1 ಲಕ್ಷ 40 ರೂಪಾಯಿ ಹಣವನ್ನು ತರಲು ಹೇಳಿದ್ದರು. ಮಾಳಮಾರುತಿ ಪೋಲಿಸರು ಮತ್ತು ಚಾಸಾ-1 ಸೇರಿ ಆ ಮಗುವನ್ನು ಚಿಕಿತ್ಸೆಗಾಗಿ ಬೆಳಗಾವಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಕಾರಿನಲ್ಲಿ ಮಗುವನ್ನು ಹಿಡಿದುಕೊಂಡಿದ್ದ ಹುಡುಗಿಯ ಹೆಸರು ಪೂಜಾ ಎಂಬುದಾಗಿತ್ತು. ಆಕೆ 1ನೇ ಆರೋಪಿಯ ಮಗಳು ಎಂದು ನಮಗೆ ಮತ್ತೆ ತಿಳಿಯಿತು. ಆ ದಿನ 1ನೇ ಆರೋಪಿಯು ಬಂದ ಕಾರಿನ ನಂ. ಕೆ ಎ 22 ಎಮ್ ಸಿ 8906 ಆಗಿತ್ತು. 1ನೇ ಆರೋಪಿಯು ತಾನು ಆ ಮಗುವನ್ನು ರೂ. 60,000/- ಗೆ ಕಿತ್ತೂರಿನ ಚೆಂದನ ಸುಬೇದಾರ ಎನ್ನುವವರಿಂದ ಖರೀದಿಸಿದ್ದಳು ಎಂದು ತಿಳಿಸಿದಳು. ನಾನು 1ನೇ ಆರೋಪಿಯನ್ನು ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ಗುರುತಿಸಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

<u>ಪಾಟೀ ಸವಾಲುಃ 1ನೇ ಆರೋಪಿತರ ಪರವಾಗಿಃ ಶ್ರೀ ಸಿ ಎ ಟಿ. ವಕೀಲರಿಂದಃ</u>

5. ಚಾಸಾ-1 ರವರು ನನ್ನ ಬಳಿ 8ನೇ ತಾರೀಖಿನಂದು ಸಂಜೆ 4-00 ರಿಂದ 5-00 ಗಂಟೆಗೆ ಅವರಿಗೆ ಮಹಾಂತೇಶ ಭಜಂತ್ರಿ ಅವರು ಕೊಟ್ಟ ಮಾಹಿತಿಯ ಬಗ್ಗೆ ಹೇಳಿದರು. ಚಾಸಾ-1 ರವರು ನನಗೆ ಕಾನೂನು ಬಾಹಿರವಾಗಿ ದತ್ತು ಪ್ರಕ್ರೀಯೆ ನಡೆಯುತ್ತದೆ ಎಂದು ಮಾಹಿತಿ ಕೊಟ್ಟಿದ್ದರು. ಚಾಸಾ-1 ರವರು ನಮಗೆ ಬೆಳಗಾವಿಯ ನಿಸರ್ಗಾ ಹೋಟೆಲ್ ಬಳಿ ಆ ದತ್ತು ಪ್ರಕ್ರೀಯೆ ನಡೆಯಬಹುದು ಮತ್ತು ಅಲ್ಲಿ ತಂಡ ಕಟ್ಟಿ ಹೋಗಿ ಎಂದು ಹೇಳಿದ್ದರು. ಮಹಾಂತೇಶ ಭಜಂತ್ರಿ ಅವರು ನಮ್ಮ ತಂಡದಲ್ಲಿ ಇರಲಿಲ್ಲ. ಮಾರನೇ ದಿನ ಬೆಳಿಗ್ಗೆ 5-00 ರಿಂದ 5-30 ಅವಧಿಯಲ್ಲಿ ನಾವು ನಮ್ಮ ತಂಡವನ್ನು ರಚನೆ ಮಾಡಿದ್ದೇವು ಮತ್ತು ತಂಡ ರಚನೆ ಮಾಡುವವರೆಗೆ ನಾನು ಮತ್ತು ಚಾಸಾ-23 ಮತ್ತು ಚಾಸಾ-25 ರಿಂದ 27 ಈ ಬಗ್ಗೆ

ಯಾವುದೇ ಮಾತುಕತೆ ಮಾಡಿಕೊಂಡಿರಲಿಲ್ಲ. ಬೆಳಿಗ್ಗೆ 5-00 ಗಂಟೆಯಿಂದ 5-30 ಅವಧಿಯಲ್ಲಿ ನಾವು ತಂಡ ರಚನೆ ಮಾಡುವವರೆಗೆ ಚಾಸಾ-1 ರವರು ಈ ಬಗ್ಗೆ ಬೇರೆ ಯಾರಿಗೆ ಎನು ಮಾಹಿತಿ ಕೊಟ್ಟಿದ್ದಾರೆ ಎನ್ನುವ ಬಗ್ಗೆ ನನಗೆ ಸ್ವಂತ ಮಾಹಿತಿ ಇಲ್ಲ. ಚಾಸಾ-1 ರವರು ಬೇರೆ ಯಾರಿಗೂ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ ಎಂದು ನಾನು ಹೇಳುತ್ತೇನೆ.

6. ನಾವು ತಂಡ ರಚಿಸಿದ ನಂತರ ನಿಸರ್ಗ ಹೋಟೇಲ್ ಬಳಿ ಹೋಗಿದ್ದಾಗ ಅಲ್ಲಿ ಕಾರು ಬರುತ್ತಿತ್ತು. ಚಾಸಾ-27 ರವರು ಆ ಕಾರನ್ನು ಕೈ ಸನ್ನೆ ಮಾಡಿ ನಿಲ್ಲಿಸಿದ್ದರು. ಕಾರನ್ನು ಚಾಸಾ-27 ರವರು ನಿಲ್ಲಿಸಿದ ಜಾಗದಿಂದ ನಾನು ಸುಮಾರು 100 ಮೀ ರಿಂದ 200 ಮೀ ದೂರದಲ್ಲಿದೆ. ಚಾಸಾ-27 ಮತ್ತು 1ನೇ ಆರೋಪಿಯ ನಡುವೆ ಆದ ಮಾತುಕತೆ ನನಗೆ ಕೇಳಿಸಿದೆ ಎಂದು ನಾನು ಹೇಳುತ್ತೇನೆ. ಆ ಕಾಲಕ್ಕೆ ಚಾಸಾ-27 ಮತ್ತು 1ನೇ ಆರೊಪಿಯ ನಡುವೆ ವಾಗ್ವಾದ ಆಗಿತ್ತು. ಆ ವಾಗ್ವಾದ ನಡೆದ ನಂತರ ಅದನ್ನು ಕೇಳಿ ನಾವು ಮತ್ತು ನಮ್ಮ ತಂಡದ ಸದಸ್ಯರು ಅವರ ಬಳಿ ಹೋಗಿದ್ದೆವು. ಚಾಸಾ-1 ರವರು ನಮಗೆ ಕೊಟ್ಟ ಮಾಹಿತಿಯಂತೆ ಬಂದ ವ್ಯಕ್ತಿಗಳು ಅವರೇ ಎಂದು ತಿಳಿದು ನಾವು ಅಲ್ಲಿ ಹೋಗಿದ್ದೇವು ಎನ್ನುವುದು ಸರಿ. ಆ ಕಾಲಕ್ಕೆ 1ನೇ ಆರೋಪಿ ಮತ್ತು ಕಾರಿನ ಚಾಲಕ ನಾವು ಕೆ ಎಲ್ ಇ ಆಸ್ಪತ್ರೆಗೆ ಮಗುವನ್ನು ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದ್ದರು ಎನ್ನುವುದು ನಿಜವಲ್ಲ. ನಿಸರ್ಗ ಹೋಟೇಲ್ ನಿಂದ ಸುಮಾರು 400-500 ಮೀ ದೂರದಲ್ಲಿ ಕೆ ಎಲ್ ಇ ಆಸ್ಪತ್ರೆ ಇದೆ ಎನ್ನುವುದು ನಿಜ. ನಾವು ಕಾರನ್ನು ನಿಲ್ಲಿಸಿದ ಸ್ಥಳದಿಂದ ನಿಸರ್ಗ ಹೋಟೇಲ್ ಸುಮಾರು 40-50 ಮೀ ದೂರದಲ್ಲಿದೆ. ನಿಸರ್ಗ ಹೋಟೇಲ್ ನ ಆಜು ಬಾಜು ಸಾಕಷ್ಟು ಅಂಗಡಿಗಳು ಇವೆ ಎನ್ನುವುದು ನಿಜ. ಈ ಘಟನೆ ಆಗುವ ಕಾಲಕ್ಕೆ ನಿಸರ್ಗ ಹೋಟೇಲ್ ನ ಅಕ್ಕ ಪಕ್ಕ ಸಾಕಷ್ಟು ಜನಸಂಚಾರ ಇತ್ತು. ನಿಸರ್ಗ ಹೋಟೇಲ್ ನ ಕೆಲಸಗಾರರು ಅಲ್ಲಿ ಇದ್ದರೇ ಎಂಬ ಪ್ರಶ್ನೆಗೆ ಸಾಕ್ಷಿ ಆಗ ಹೋಟೇಲ್ ಬಂದು ಇದ್ದು ನಾವು ಅವರನ್ನು ನೋಡಿಲ್ಲ ಎನ್ನುತ್ತಾರೆ. ಈ ಘಟನೆ ಆಗುವ ಕಾಲಕ್ಕೆ ನಾವು ಮತ್ತು ಪೋಲಿಸರು ಹೊರತುಪಡಿಸಿ ಬೇರೆ

ಜನರು ಅಲ್ಲಿಗೆ ಬಂದಿರಲಿಲ್ಲ. ಆ ದಿನ ಇಬ್ಬರು ಮಹಿಳಾ ಪೋಲಿಸರು ಮತ್ತು ಇಬ್ಬರು ಪುರುಷ ಪೋಲಿಸರು ನಮ್ಮೊಂದಿಗೆ ಇದ್ದರು. ಈ ಘಟನೆಯನ್ನು ವಿಡಿಯೋ ಮಾಡಲಾಗಿದೆ ಮತ್ತು ಅದರ ಪೋಟೋ ತೆಗೆಯಲಾಗಿದೆ ಎಂದು ನಾನು ಹೇಳುತ್ತೇನೆ. ಸುಮಾರು 7-00 ಗಂಟೆಗೆ ನಾವು ಘಟನಾ ಸ್ಥಳದಿಂದ ಮಾಳಮಾರುತಿ ಪೋಲಿಸ ಠಾಣೆಗೆ ಅವರನ್ನೆಲ್ಲಾ ಕರೆದುಕೊಂಡು ಹೋಗಿದ್ದೆವು. ನಾನು ಪೋಲಿಸ ಠಾಣೆಗೆ ಹೋದ ನಂತರ ನನಗೆ ಆ ಮಗುವನ್ನು ರೂ. 60,000/- ಗೆ ಕಿತ್ತೂರಿನಿಂದ ಖರೀದಿಸಲಾಗಿದೆ ಮತ್ತು ರೂ. 1,40,000/- ಕ್ಕೆ ಮಾರಾಟ ಮಾಡಲು ಸಿದ್ದತೆ ಮಾಡಲಾಗಿದೆ ಎಂದು ತಿಳಿಯಿತು. ಈ ವಿಚಾರವನ್ನು ನನಗೆ ಪೋಲಿಸ ಠಾಣೆಗೆ ಹೋದ ನಂತರ ಅವರು ಹೇಳಿ ತಿಳಿಸಿದ್ದು ಹೊರತುಪಡಿಸಿ ನನಗೆ ಯಾವುದೇ ಸ್ವಂತ ಮಾಹಿತಿ ಈ ಬಗ್ಗೆ ಇರುವುದಿಲ್ಲ.

8. ನಿಸರ್ಗ ಹೊಟೇಲಿನ ಬಳಿ ಈ ಘಟನೆ ನಡೆದು ನಾವು ಮಾಳಮಾರುತಿ ಪೋಲಿಸ ಠಾಣೆಗೆ ಹೋಗುವ ಮೊದಲು ಆ ಸ್ಥಳದಲ್ಲಿ ಪಂಚನಾಮೆ ಮಾಡಿದ್ದರು ಎಂದು ನಾನು ಹೇಳುತ್ತೇನೆ. ದಿಃ 08.06.2024 ರಂದು ಮಹಾಂತೇಶ ಭಜಂತ್ರಿ ಯವರು ಚಾಸಾ-1 ರವರಿಗೆ ಮಾರನೇ ದಿನ ಮಗುವಿನ ಮಾರಾಟ ಆಗುವ ಬಗ್ಗೆ ಮಾಹಿತಿ ಬಂದಿದೆ ಮತ್ತು ನಾವು ಆ ಬಗ್ಗೆ ತಂಡ ರಚಿಸಿ ಹೊಗಬೇಕು ಎಂದು ಹೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಪ್ರಕಾರ ದಿಃ 09.06.2024 ರಂದು ನಾವು ತಂಡ ರಚಿಸಿ ನಿಸರ್ಗ ಹೋಟೆಲ್ ಬಳಿ ಹೋಗಿದ್ದೇವು ಮತ್ತು ಅಲ್ಲಿ 1ನೇ ಆರೋಪಿಯು ಕಾರಿನಲ್ಲಿ ಮಗುವನ್ನು ಹಿಡಿದುಕೊಂಡು ಬಂದಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಬಳಿಕ ನಾವು 1ನೇ ಆರೋಪಿ ಮತ್ತು ಮಗುವನ್ನು ಕರೆದುಕೊಂಡು ಮಾಳಮಾರುತಿ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

9. ಆ ಮಗುವನ್ನು 1ನೇ ಆರೋಪಿಯ ರೂ. 60,000/- ಕಿತ್ತೂರಿನಲ್ಲಿ ಖರೀದಿಸಿ ಆ ಬಳಿಕ ಅದನ್ನು ರೂ.1,40,000/- ಮಾರಾಟ ಮಾಡಲು ಪ್ರಯತ್ನಿಸಿದ್ದಳು ಎನ್ನುವ ವಿಚಾರ ನನಗೆ ತಿಳಿದು ಬಂತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆ ಮಗುವಿನ ಆರೋಗ್ಯ ಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ ಎನ್ನುವುದು ನಿಜ. ಆ ಮಗುವಿನ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲವಾದ್ದರಿಂದ ಅದನ್ನು ಆಸ್ಪತ್ರೆಗೆ ದಾಖಲಿಸಲು ಅವರು ಬಂದಾಗ ನಾವು ಅವರನ್ನು ಮಾಳಮಾರುತಿ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿದ್ದೇವು ಎಂಬ ಪ್ರಶ್ನೆಗೆ ಸಾಕ್ಷಿ ನಾವು ಅವರನ್ನು ಮಾಳಮಾರುತಿ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿದ್ದು ನಿಜ ಆದರೇ ಅವರು ಆ ಮಗುವನ್ನು ಆಸ್ಪತ್ರೆಗೆ ದಾಖಲಿಸಲು ಬಂದಿದ್ದಲ್ಲ ಎನ್ನುತ್ತಾರೆ. ಅನಾರೋಗ್ಯ ಸ್ಥಿತಿಯಲ್ಲಿದ್ದ ಆ ಮಗುವನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಿಡದೇ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿ ಆ ಬಳಿಕ ಆ ಮಗುವಿನ ಆರೋಗ್ಯ ಸ್ಥಿತಿ ಬಿಗಡಾಯಿಸಿ ಅದು ಸತ್ತು ಹೋಗಲು ನಾವು ಮತ್ತು ಪೋಲಿಸರೇ ಕಾರಣ ಎನ್ನುವುದು ನಿಜವಲ್ಲ. ನಾವು ಆ ಮಗುವಿನ ನಿಜವಾದ ತಂದೆ ತಾಯಿಯನ್ನು ನಿಸರ್ಗ ಹೋಟೆಲಿನಿಂದ ಪೋಲಿಸ ಠಾಣೆಗೆ ಕರೆದುಕೊಂಡು ಬಂದಿಲ್ಲ.

<u>ಪಾಟೀ ಸವಾಲುಃ 2ನೇ ಆರೋಪಿತರ ಪರವಾಗಿಃ ಶ್ರೀ ಬಿ ಆರ್ ಕೆ ವಕೀಲರಿಂದಃ</u>

10. 1ನೇ ಆರೋಪಿಯು ಆ ಮಗುವನ್ನು ಕಿತ್ತೂರಿನಲ್ಲಿ ಯಾರ ಕರೆಯಿಂದ ತೆಗೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಮಾಳಮಾರುತಿ ಪೋಲಿಸ ಠಾಣೆಯಲ್ಲಿ 1ನೇ ಆರೋಪಿಯನ್ನು ಪೋಲಿಸರು ವಿಚಾರಿಸಿದ ನಂತರ ಆಕೆ ಆ ಮಗುವನ್ನು ಚಂದನ ಸುಬೇದಾರ ಎನ್ನುವವರಿಂದ ಖರೀದಿಸಿದ್ದಳು ಎಂದು ತಿಳಿದು ಬಂತು. ಆ ಚಂದನ ಸುಬೇದಾರ ಯಾರು ಎನ್ನುವ ಬಗ್ಗೆ ನನಗೆ ಮೊದಲು ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಪೋಲಿಸರ ಮಾತು ಕೇಳಿ ನಾನು 1ನೇ ಆರೋಪಿಯು ಆ ಮಗುವನ್ನು ಚಂದನ

ಸುಬೇದಾರದನಿಂದ ಖರೀದಿ ಮಾಡಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

<u>ಪಾಟೀ ಸವಾಲುಃ ಇತರ ಆರೋಪಿತರ ಪರವಾಗಿಃ</u>

ಇತರ ಆರೋಪಿತರ ಪರ ವಕೀಲರು ತಾವು ಮೇಲಿನ ಪಾಟೀ ಸವಾಲನ್ನು ಅನುಸರಿಸುವುದಾಗಿ ಹೇಳುತ್ತಾರೆ.

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.